ಓದು, ನಾಟಕಗಳ ನಿರ್ದೇಶನ, ನಟನೆ, ಬರವಣಿಗೆ... ಹೀಗೆ ಸೃಜನಶೀಲ ಕ್ಷೇತ್ರದಲ್ಲಿ ಸಕ್ರಿಯವಾಗಿರುವ ಎಸ್. ಸುರೇಂದ್ರನಾಥ್ ಅವರು ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆಯವರು. ದಾವಣಗೆರೆಯಲ್ಲಿ ಶಿಕ್ಷಣ, ಬೆಂಗಳೂರು ಮತ್ತು ಹೈದರಾಬಾದ್‌ನಲ್ಲಿ ವೃತ್ತಿ ನಿರ್ವಹಿಸಿದವರು. 'ಎನ್ನ ಭವದ ಕೇಡು' ಕಾದಂಬರಿ, ಕಟ್ಟು ಕತೆಗಳು, ತಾಪತ್ರಯಗಳು ಎಂಬ ಕಥಾಸಂಕಲನ ಪ್ರಕಟಿಸಿದ್ದಾರೆ.

ಯೇನು ಹೇಳ್ತದೋ ಹಂಗೆ ಅವನು ಮಾಡಿದಾನೆ. ಅವನಿಗೆ ವನ್ಸತಿ ಅಯ್ಯೋ ಪಾಪ ತಪ್ಪು ಮಾಡಿದೀನಿ ನಾನೂ ಅಂತ ಅನಿಸಿದ್ರೆ ಸಾಕು.'

ಯಮಧರ್ಮ ತೊಡೆಗೆ ಕೈ ತಟ್ಟಾ, ಕಿರಿಚಿದ, 'ಅದ್ದೇ ನಾನು ಹೇಳ್ತಿರದು. ಕಣ್ಣೀರಿಟ್ಟೋರಿಗೆ ಅಯ್ಯೋ ಪಾಪ ಅನ್ನಾದಿರಲಿ, ಯಿಲ್ಲಿ ಬಂದು ಅವರುನ್ನೇ ಗೇಲಿ ಮಾಡ್ತಿದಾನೆ.'

'ನಾನು ಗೇಲಿ ಮಾಡಿಲ್ಲಯ್ಯಾ. ನನ್ನ ಕಸುಬು ಯೇನು ಹೇಳ್ತತೋ ಹಂಗೆ ಮಾಡಿದೀನಿ. ಆ ತ್ರುಪ್ತಿ ಯಿದೆ ನಂಗೆ. ವಂದಿನ ನನ್ನ ಕಸುಬಿಗೆ, ನನ್ನ ಕರ್ತವ್ಯಕ್ಕೆ ಮೋಸ ಮಾಡಿಲ್ಲ. ನನ್ನ ಕೆಲಸ ನಾನು ಮಾಡಿದ್ರೆ ಅದೇನು ಪಾಪ ಮಾಡ್ದಂಗೇನಯ್ಯಾ?'

ಭಗವಂತ ಟೈಮ್ ನೋಡ್ಕಂಡ. 'ಆತಪಾ, ಪಾಪ ಅಲ್ಲ. ನಿಂದೊಂದು ಸ್ಪೆಷಲ್ ಕೇಸು ಅಂತಿಟ್ಕಳಣ. ಯಮಧರ್ಮ ಸೊಲ್ಪ ದುಡುಕ್ದ, ವಪ್ಗತೀನಿ. ಈಗ ನಿನ್ನ ಕೇಸೇನಿದೆ ನೋಡಣ. ವಂದು ವಳ್ಳೇ ಕೆಲಸ ಯೇನು ಮಾಡಿದೀಯಾ ಹೇಳು ನೋಡಣ'

'ಭಗವಂತಾ, ಇಲ್ಲೀ ತನ ನಾನು ಯಾರತ್ರಾನೂ ಬಾಕಿ ಯಿಟ್ಗಂಡಿಲ್ಲ. ಕೊಡೋರಿಗೆ ಅದೇನು ಕೊಡಬೇಕೋ ಆವಾಗಾವಾಗ್ಲೇ ಕೊಟ್ಟಿದೀನಿ. ಸೀತಾರಾಮ ಶೆಟ್ರ ಕಿರಾಣೀ ಉದ್ರೀ, ಜರೀಕಟ್ಟೆ ಹಾಲಿನ ರೊಕ್ಕ, ಸರೋಜಮ್ಮನ ತಿಂಗಳ ಸಂಬಳ, ವಂದೂ ಬಾಕಿ ಇಟ್ಗಂಡಿಲ್ಲ. ಕೊನೇ ಪೈಗೆ ಪೈ ಚುಕ್ತಾ ಮಾಡೀನಿ. ನನ್ನ ಕರ್ತವ್ಯಾನ ಕರೆಕ್ಟಾಗಿ ಮಾಡಿದೀನಿ.'

ಭಗವಂತ ತಲೆ ಅಲ್ಲಾಡುಸ್ದ. 'ಸಾಲದು. ಯಿನ್ನೇನಿದೆ? ನೆನಪಿದ್ಯಾ ನಿಂಗೆ?'

'ಒಂದು ಮೂವತ್ತು ವರ್ಷದ ಹಿಂದೆ, ನಮ್ಮಪ್ಪನ ತಿಥಿ ಮಾಡೋವಾಗ, ಒಬ್ಬ ಭಿಕ್ಷುಕಂಗೆ ಒಂದು ರೂಪಾಯಿ ಕೊಟ್ಟಿದ್ದೆ ನೋಡಪಾ.'

'ಕೊಟ್ಟಿದ್ದಾ ನಿಜ. ಖೋಟಾ ನೋಟದು.'

'ಹಂಗಂತ ಹೇಳಿ ಅವನು ಅದುನ್ನ ನಂಗೆ ವಾಪಸ್ಸು ಕೊಟ್ನಾ? ಯಿಲ್ಲ. ಅದುನ್ನ ಯಲ್ಲಾನಾ ಚಲಾವಣೆ ಮಾಡೇ ಮಾಡಿರ್ತಾನೆ. ಹಂಗಂದ ಮೇಲೆ ಅದು ಖೋಟಾ ಹೆಂಗಾಯ್ತಪಾ?'

'ಅಷ್ಟೇನಾ?'

'ನಂಗೆ ಇನ್ನೇನೂ ನೆನಪಾಗ್ತಾಯಿಲ್ಲ.'

ಭಗವಂತಂಗೂ ತಿಳೀತು, ಈ ಜಂಬಂಣನ ಎದೆ ಸೀಳಿದ್ರೆ ವಂದು ಹನಿ ಕರುಣೆ ಸಿಗಲ್ಲ ಅಂತ. ಯಿಬ್ರೂ ಸೇರಿ ತನ್ನ ಟೈಮ್ ಹಾಳು ಮಾಡ್ತಿದಾರಲ್ಲಾ ಅಂತ ಸೊಲ್ಪ ಸಿಟ್ಟೂ ಬಂತು. ಜಂಬಂಣನಿಗೆ ತಿಳೀಬಾರ್ದು ಅಂತ ದೇವಲೋಕದ ಭಾಷೆಯಲ್ಲಿ ಯಮಧರ್ಮಂಗೆ ಹೇಳಿದ. 'ಪಶ್ಯ ಯಮಧರ್ಮ, ಏತತ್ ತವ ಅಪರಾಧಃ. ಅಧುನಾ ಮಮ ವಚನಂ ಶೃಣು' ನೋಡಯ್ಯಾ ಯಮಧರ್ಮ, ಯಿದು ನಿನ್ನ ತಪ್ಪು. ಈಗ ನಾನು ಹೇಳದನ್ನ ಕೇಳು. (ಭಗವಂತ ಮತ್ತು ಯಮಧರ್ಮನ ಸಂಭಾಷಣೆ ಕನ್ನಡದ ಓದುಗರಿಗೂ ತಿಳೀಲಿ ಅಂತ ಇನ್ನು ಮುಂದಿನ ಸಂಭಾಷಣೆಯನ್ನು ಕನ್ನಡಕ್ಕೆ ಭಾಷಾಂತರಿಸಲಾಗಿದೆ, ಓದುಗರು ಗಮನಿಸಬೇಕು. ಭಾಷಾಂತರ ಲೇಖಕನದ್ದೇ) ನಿನ್ನ ಯಡವಟ್ಟು ಯಿದು. ಅವಸರ ನಿಂಗೆ. ಹೇಳ್ತನೇ ಯಿದೀನಿ. ಸಾವಧಾನ ಯಿರಬೇಕು ಯಾವಾಗ್ಲೂ. ಇಲ್ಲಿಗೆ ಬರರು ಸತ್ತಿದ್ರೇನಂತೆ. ಆತ್ಮಗಳಪಾ ಅವು. ಇವನಿಗೆ ಹೇಳದನ್ನ ಮೆತ್ತಗೆ ಹೇಳಬೇಕಿತ್ತು. ವಂದೇ ಯೇಟಿಗೆ ಬೆಂಕಿ ಹಾಕ್ರೋ ಅಂದ್ರೆ? ಅವನ ವ್ಯಕ್ತಿ ಗೌರವಕ್ಕೆ, ಕಸುಬಿನ ಗೌರವಕ್ಕೆ ಯೇಟು ಬಿದ್ದದೆ. ಅದುಕ್ಕೆ ಹಿಂಗಾಡ್ತನೆ. ಸರಿ. ಯಿವನುನ್ನ ನೋಡಿದ್ರೆ ಕರುಣೆ ಇವನ ಹತ್ರಕ್ಕೂ ಸುಳಿಯಂಗಿಲ್ಲ ಅನ್ನುಸ್ತತೆ. ಯಿಲ್ಲಿ ಗಲಾಟೆ ಮಾಡ್ತಿದಾನೆ ಅಂತ ಯಿವುನುನ್ನ ಸ್ವರ್ಗಕ್ಕೆ ಬಿಟ್ಕಮಕೆ ಆಗಲ್ಲ. ತ್ರಿಮೂರ್ತಿಗಳಿಗೆ ಯೇನಾರಾ ಗೊತ್ತಾತಪಾ ಅಂದ್ರೆ ಮೆಟ್ನಗೆ ಹೊಡಿತರೆ. ಯೇನಾರಾ ವಂದು ಮಾಡಬೇಕು. ಯೇನು ಮಾಡಣ ಹೇಳು'

ಯಮಧರ್ಮನಾರಾ ಯೇನು ಹೇಳ್ತನೆ. ನಂಗೇ ಬಿಟ್ಟಿದ್ರೆ ಯಿಷ್ಟತ್ತಿಗೆ ಅರ್ಧ ಬೆಂದು ಹೋಗಿರತಿದ್ದ.